ಜಿಲ್ಲೆಯ ಅಗತ್ಯತೆಯನ್ನು ಪೂರೈಸುವ ವಾಣಿವಿಲಾಸ್ ಸಾಗರ ಮತ್ತಿತರ ಅಗತ್ಯ ಪ್ರದೇಶಗಳಿಗೆ ನೀರನ್ನು ಒದಗಿಸಬಹುದಾಗಿದೆ. ಇದರ ಬಗ್ಗೆ ಸರ್ಕಾರ ಎಲ್ಲರ ಜೊತೆ ಚರ್ಚೆ ಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಎರಡನ್ನೂ ಕೂಡ ನಾವು ಅತ್ಯಂತ ಗಂಭೀರವಾಗಿ ಮತ್ತು ಬಹಳಷ್ಟು ಜ್ವಲಂತ ಸಮಸ್ಯೆ ಇರುವಂಥ ಕೋಲಾರ, ಚಿಕ್ಕಬಳ್ಳಾಪುರ ಇನ್ನಿತರ ಜಿಲ್ಲೆಗಳಿಗೆ ನ್ಯಾಯ ಒದಗಿಸುವ ಕೆಲಸವನ್ನು ಸರ್ಕಾರ ಬಹಳ ಪ್ರಾಮಾಣಿಕವಾಗಿ ಮಾಡುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : 80 ಕಿ.ಮೀ.canal ಬೇಲೂರು, ಹಳೇಬೀಡು ಅಲ್ಲಿಗೆ ಹೋಗುತ್ತದೆಯಾ?

ಶ್ರೀ ಎಂ.ಬಿ. ಪಾಟೀಲ್ : ಅದು ಎಲ್ಲಾ ಸೇರಿಯೇ ಈ ಎತ್ತಿನಹೊಳೆ ಎರಡು ಯೋಜನೆ. ಒಂದನೆಯದು 80 ಕಿ.ಮೀ. canal ಬರುತ್ತದೆ. ಅದು R.L.965 ದಲ್ಲಿ ಬರುತ್ತದೆ. ಇನ್ನೊಂದು ಪರಮಶಿವಯ್ಯನವರ ವರದಿಯಲ್ಲಿ grand canal ಎಂದು 900RLರಲ್ಲಿ ಏನು ಮಾಡಿದ್ದಾರೆ, ಅದರಲ್ಲಿ ಬರುತ್ತದೆ. ನಮ್ಮ DPR ಮತ್ತು technical sanction ಆದ ಮೇಲೆ grand canal ನಿಂದ gravity ಮುಖಾಂತರ ಇದನ್ನು RL909 ಗೆ ತಿರುವು ಒಯ್ದಮೇಲೆ ಆ ಒಂದು canal ದಿಂದ ಆ 80 ಕಿ.ಮೀ. canal ಗೆ ಪೂರೈಸಬಹುದಾಗಿದೆ, ಧನ್ಯವಾದಗಳು.

ಶ್ರೀ ಶಿವಶಂಕರರೆಡ್ಡಿ : ಸಭೆಯನ್ನು ಬೇಗ ಮಾಡಬೇಕು.

ಅಧ್ಯಕ್ಷರು : No discussion.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಬೋರ್‌ವೆಲ್ ಕೊರೆಯಬೇಕಾದರೆ 1200 ಮತ್ತು 1800 ಅಡಿಯವರೆಗೆ ಹೋಗುತ್ತಿದೆ. ದಯವಿಟ್ಟು ಕಾಲ ಮಿತಿಯೊಳಗೆ ಮಾಡುವುದಕ್ಕೆ ಹೇಳಬೇಕು.

ಅಧ್ಯಕ್ಷರು : ಆಯಿತು. ಚರ್ಚೆ ಮುಕ್ತಾಯವಾಯಿತು.

2. ವಿಷಯ : ರಾಜ್ಯದಲ್ಲಿರುವ ಕಂದಾಯರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದು ಹಾಗೂ ಯೋಜನಾ ಆಯೋಗದಿಂದ ನೇರವಾಗಿ ಹಣ ತೊಡಗಿಸುವ ಕಂದಾಯರಹಿತ ಗ್ರಾಮಗಳಿಗೆ ಗ್ರಾಮಸಭೆ ನಡೆಸಲು ಮೂಲಭೂತ ಸೌಲಭ್ಯ ದೊರಕಿಸುವ ಬಗ್ಗೆ.

ಶ್ರೀ ಕೆ.ಶಿವಮೂರ್ತಿ (ಮಾಯಕೊಂಡ) : ರಾಜ್ಯದಲ್ಲಿರುವ ಕಂದಾಯರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದು ಹಾಗೂ ಯೋಜನಾ ಆಯೋಗದಿಂದ ನೇರವಾಗಿ ಹಣ ತೊಡಗಿಸುವ ಕಂದಾಯರಹಿತ ಗ್ರಾಮಗಳಿಗೆ ಗ್ರಾಮಸಭೆ ನಡೆಸಲು ಮೂಲಭೂತ ಸೌಲಭ್ಯ ದೊರಕಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರು ಹೇಳಿಕೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರುವ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರ ಹಟ್ಟಿ ಮತ್ತು ಮಜರೆ ಗ್ರಾಮ, ನಾಯಕರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರವು ಸಂಖ್ಯೆ: ಆರ್.ಡಿ 03 ಎಲ್.ಆರ್.ಡಿ 93(ಭಾ), ದಿನಾಂಕ:25.06.1994ರಲ್ಲಿ ಒಂದು ವಿವರವಾದ ಸುತ್ತೋಲೆಯನ್ನು ಹೊರಡಿಸಿದೆ. ಅದರಂತೆ, ಜನಸಂಖ್ಯೆ 500ಕ್ಕಿಂತ ಮೇಲ್ಪಟ್ಟು ಅಥವಾ ಕುಟುಂಬಗಳು 100 ಕ್ಕಿಂತ ಮೇಲ್ಪಟ್ಟು ಇರಬೇಕು.

ಹೊಸದಾಗಿ ರಚನೆಯಾದ ಹೊಸ ಗ್ರಾಮಗಳಿಗೆ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಸಂಬಧಿಸಿದ ಇಲಾಖೆಗಳೆಲ್ಲವೂ ಹಳೇ ಗ್ರಾಮಕ್ಕೆ ಒದಗಿಸುತ್ತಿರುವ ರೀತಿಯಲ್ಲಿಯೇ ಹೊಸ ಗ್ರಾಮಗಳಿಗೂ ಸಹ ಮೂಲ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ. ಗ್ರಾಮಸಭೆ ನಡೆಸುವ ಸಂದರ್ಭದಲ್ಲಿ ಕಂದಾಯ ರಹಿತ ಗ್ರಾಮಗಳಾದ ಲಂಬಾಣಿ ತಾಂಡಾ ಗೊಲ್ಲರಹಟ್ಟಿ, ಮಜರೆ ಗ್ರಾಮಗಳನ್ನೂ ಸಹ ಸೇರಿಸಿಕೊಂಡು ಗ್ರಾಮಸಭೆ ನಡೆಸಲಾಗುತ್ತಿದೆ ಹಾಗೂ ಸರ್ಕಾರದ ಸೌಲಭ್ಯಗಳನ್ನು ಸಹಾ ನೀಡಲಾಗುತ್ತಿದೆ.

ಕರ್ನಾಟಕ ಭೂಕಂದಾಯ ಅಧಿನಿಯಮ. 1964ರ ಕಲಂ. 5ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ. 500 ಜನ ಸಂಖ್ಯೆ ಅಥವಾ 100 ಕುಟುಂಬಗಳು ಎಂದು ಸುತ್ತೋಲೆ ಹೊರಡಿಸಿರುವುದನ್ನು ಸೂಕ್ತವಾಗಿ ಮಾರ್ಪಡಿಸಿ. ಲಂಬಾಣಿ ತಾಂಡಾ. ಗೊಲ್ಲರಹಟ್ಟಿ. ವಡ್ಡರಹಟ್ಟಿ ಮತ್ತು ಮಜರೆ ಗ್ರಾಮ. ನಾಯಕರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಕೆ.ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿರುವಂಥ ಈ ಕುಗ್ರಾಮಗಳು ಒಟ್ಟು 30,000. ಗ್ರಾಮಗಳು 28,000. ಕುಗ್ರಾಮಗಳಲ್ಲಿ ಹಟ್ಟಿಗಳು,

ತಾಂಡಾಗಳು, ಕಾಲೋನಿ, ಕುರುಮ ಹಾಗೂ ಕ್ಯಾಂಪ್ಸ್ ಇವು ಕಂದಾಯರಹಿತ ಗ್ರಾಮಗಳು ಬರುತ್ತವೆ. ಇವೆಲ್ಲಾ Microsacopic Community ಇವರು settle ಆಗಿರತಕ್ಕಂತ social settlementಗಳು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕುಗ್ರಾಮಗಳ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿದಾಗ ಒಂದು National Level Seminar ನ್ನು conduct ಮಾಡಿದ್ದಾರೆ. ಆ Seminar ನಲ್ಲಿ ಬಂದಿರತಕ್ಕಂಥ ವಿಚಾರ ಏನೆಂದರೆ, ಗ್ರಾಮಕ್ಕೆ ಅಸ್ತಿತ್ವವೇ ಇಲ್ಲ. ಗ್ರಾಮ ಎನ್ನುವ ಅಸ್ತಿತ್ವವನ್ನು ಕೊಡಬೇಕಾದರೆ Revenue Act ಗೆ ಇಲ್ಲಿ amendmentತರಬೇಕು. ಗ್ರಾಮ ಒಂದು Independent body, non-grama is a dependent body ಇದನ್ನು Revenue Act ಕೆಳಗಡೆ define ಮಾಡಿಲ್ಲ. ನಮಗೆ classification ಕೊಟ್ಟಿಲ್ಲ. ನಮಗೆ legal status ಕೊಟ್ಟಿಲ್ಲವೆಂದು ಹೇಳುವ ವಾದಕ್ಕೆ ನಾವು ಮೊದಲಿನಿಂದಲೂ ಬಂದಿದ್ದೇವೆ. ಇದು ಒಂದು ತರಹ ಮೂಕವೇದನೆ. ಹಟ್ಟಿಗಳನ್ನು, ತಾಂಡಾಗಳನ್ನು ತಾವು ಗ್ರಾಮಗಳೆಂದು ಸ್ವೀಕಾರ ಮಾಡಿ ಅದಕ್ಕೆ ಒಂದು ಮಾನ್ಯತೆಯನ್ನು ಕೊಟ್ಟರೆ Act ಕೆಳಗಡೆ ನಮ್ಮ Identification ತೋರಿಸಿ ಕೊಟ್ಟರೆ ನಾವು ಈ ದೇಶದಲ್ಲಿ ಎಲ್ಲಿದ್ದೇವೆ, ನಮಗೆ ಪ್ರತ್ಯೇಕತೆ, ನಮಗೆ ಗ್ರಾಮ ಎಂದು ಹೇಳತಕ್ಕಂಥ status ನ್ನು ಕೊಟ್ಟರೆ ನಮಗೆ ಕರ್ನಾಟಕ ರಾಜ್ಯದಿಂದ ಅಥವಾ ಕೇಂದ್ರದಿಂದ ಬರತಕ್ಕಂಥ ಯೋಜನೆಗಳ ಸೌಲಭ್ಯಗಳನ್ನು ನೇರವಾಗಿ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.Non-Grama is not a unit. Unit ಎಂದರೆ onyl Grama. ಹಾಗಾಗಿ Non-Grama ಇರುವಂತಹ ಈ ತಾಂಡಾಗಳನ್ನು ಯೋಜನೆಯಡಿಯಲ್ಲಿ 'ಗ್ರಾಮ' ಎಂದು ಯಾವ ರೀತಿ ಸೌಲಭ್ಯಗಳನ್ನು ಕೊಡಬೇಕಾದರೆ unit ಆಗಿ ಪರಿಗಣನೆ ಮಾಡುತ್ತಾರೋ, ಆ ರೀತಿಯಾಗಿ ಮಾಡಬೇಕಾದರೆ, ಇದು ಮೊಟ್ಟಮೊದಲಿಗೆ ಸರ್ವೆ ಆಗಬೇಕು. ಗೊಲ್ಲರಹಟ್ಟಿಗಳು ಬೇರೆ private ಆಸ್ತಿಯೊಳಗೆ ಇವೆ. ಅವರಿಗೆ ಇದುವರೆಗೂ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳನ್ನು ಕೊಟ್ಟಿಲ್ಲ. ಅದೇ ರೀತಿ ತಾಂಡಾಗಳನ್ನು ಸಹ illegal ಆಗಿ ಕಟ್ಟಿಕೊಂಡಿರುವುದು, ಅವುಗಳೆನ್ನೆಲ್ಲಾ legalize ಮಾಡಬೇಕಾದರೆ, regularize ಮಾಡಬೇಕಾದರೆ, ಇವರ ಸರ್ವೆ ಮಾಡಬೇಕು, census ಮಾಡಬೇಕು, Economic Conditions ಅನ್ನು

ಅಧ್ಯಯನ ಮಾಡಬೇಕು. ಆ ಮೂಲಕ ಎಲ್ಲಿ ಕೊರತೆ ಇದೆಯೋ ಎಲ್ಲಿ deficiency ಇದೆಯೋ ಆ ರೀತಿ ಯೋಜನೆ ಮಾಡಿ ಅದಕ್ಕೆ ಶಕ್ತಿ ತುಂಬುವಂತಹ ಕೆಲಸ ಮಾಡಬೇಕು.We have been denied opportunity after independence ನಾವು ಈ ಕೂಗನ್ನು ಇವತ್ತಿನಿಂದ ಕೇಳುತ್ತಿಲ್ಲ. ಸ್ವತಂತ್ರ ಬಂದ ಮೇಲೆ ಗ್ರಾಮ ಪಂಚಾಯಿತಿ ಆ್ಯಕ್ಟ್‌ಅನ್ನು ತಂದಿದ್ದಾರೆ. ಗ್ರಾಮಸಭೆ ಎಂದು ಹೇಳುತ್ತಾರೆ. ಗ್ರಾಮ ಸಭೆ ಆಗಬೇಕಾದರೆ ನಾವು ಗ್ರಾಮವೇ ಅಲ್ಲ. We are all non-gramas. Thandas, Hattis, Haadis, Camp Colonies ಇದಕ್ಕೆ ತಾವೂ ಕೂಡ ಹೋರಾಟ ಮಾಡಿದೀರಿ. ಸೇಂದಿವನದಲ್ಲಿ ನಾವು ಒಂದು ಊರನ್ನು ಕಟ್ಟಿಕೊಂಡಿದ್ದೇವೆ. ಅರಣ್ಯದಲ್ಲಿ ನಾವು ತಾಂಡಾಗಳನ್ನು ಕಟ್ಟಿಕೊಂಡಿದ್ದೇವೆ. ಖಾಸಗಿ ಜಮೀನಿನಲ್ಲಿ ಊರುಗಳನ್ನು ಕಟ್ಟಿಕೊಂಡಿದ್ದೇವೆ. ಇದಕ್ಕೆ ತಾವು 'ಗ್ರಾಮ' ಎಂದು ಅಸ್ತಿತ್ವ ಕೊಡದೇ ಹೋದರೆ ಅವೆಲ್ಲವೂ ಈ ರಾಷ್ಟ್ರದಲ್ಲಿ, ಈ ರಾಜ್ಯದಲ್ಲಿ, ಎರಡನೇದರ್ಜೆಯ ತಾಂಡಾಗಳು, ಗ್ರಾಮಗಳು ಆಗುತ್ತವೆ. ಈ ಗ್ರಾಮದಲ್ಲಿ ವಾಸಿಸುವಂತಹ ಜನರು ನಾವು ಎರಡನೇ ದರ್ಜೆಯಾಗಿ ಕಾಣಿಸಿಕೊಳ್ಳುತ್ತೇವೆ. ಇಲ್ಲಿ majority ಇರತಕ್ಕಂಥವರು Scheduled Castes. Scheduled Tribes, Backward Class ಮತ್ತು ಕೂಲಿಗಾರರು ಆಗಿರುತ್ತಾರೆ. ಅವರಿಗೆ ಗ್ರಾಮ ಸಭೆಯ ಅಸ್ತಿತ್ವ ತರಬೇಕಾದರೆ, ಪಂಚಾಯಿತಿಯ Revenue Act ಕೆಳಗಡೆ ತಾವು amendment ತರಬೇಕು. ಅದನ್ನು ಸರ್ವೆ ಮಾಡಿಸಬೇಕು,Territory and boundary ಅನ್ನು fix ಮಾಡಬೇಕು. ಅದಾದನಂತರ ಗ್ರಾಮಸಭೆ ಬರುತ್ತದೆ. ಇದರ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು, ತಾವು ಮಾತನಾಡಿದ್ದು ಸಾಕು. ಇನ್ನೂ ಮಾತನಾಡುವುದಕ್ಕೆ ಬೇರೆಯವರು ಇದ್ದಾರೆ. ಮಾನ್ಯ ರಾಜಣ್ಣನವರು ಮಾತನಾಡುವುದು.

ಶ್ರೀ ಕೆ.ಶಿವಮೂರ್ತಿ : ನಾವು ತಾಂಡಾಗಳ ಬಗ್ಗೆ ಮಾಹಿತಿ ಕೇಳಿದಾಗ, ಕೇವಲ 800 ತಾಂಡಾಗಳಿವೆ ಎನ್ನುವ ಮಾಹಿತಿಯನ್ನು ಕೊಡುತ್ತಾರೆ. ಸುಮಾರು

4,800 ತಾಂಡಾಗಳಿವೆ ಹಾಗಾಗಿ ಅಧಿಕಾರಿಗಳು ಸದನವನ್ನು misguide ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸದನವನ್ನು ಯಾರು mislead ಮಾಡಿದ್ದಾರೆ?

(ಗೊಂದಲ)

ಶ್ರೀ ಕೆ.ಶಿವಮೂರ್ತಿ : 800 ತಾಂಡಾಗಳಿವೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಎನ್ನುವುದನ್ನು ಆನಂತರ ಕೇಳೋಣ. ಮೊದಲು ನೀವು ಏನು ಹೇಳುತ್ತೀರಿ ಎನ್ನುವುದನ್ನು ಹೇಳಿ ಸಾಕು.

(ಗೊಂದಲ)

ಶ್ರೀ ಕೆ.ಶಿವಮೂರ್ತಿ : ಸರ್, ನಾನು ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಈಗ ತಾವು ಮಾತನಾಡಿರುವುದು ಸಾಕು. ಸಂಕ್ಷಿಪ್ತವಾಗಿರಬೇಕು. ಮಾನ್ಯ ಬಿಜಣ್ಣನವರು ಮಾತನಾಡುವುದು. ಹಾಜರಿಲ್ಲ. ಜಿ. ರಾಮಕೃಷ್ಣರವರು, ಹಾಜರಿಲ್ಲ.

(ಗೊಂದಲ)

ಡಾ.ಉಮೇಶ್ ಜಿ.ಜಾಧವ್ : ಮಾನ್ಯ ಅಧ್ಯಕ್ಷರೆ,. . . .

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರೆ, ದಯವಿಟ್ಟು ಕುಳಿತುಕೊಳ್ಳಿ. ತಾವು ಇಲ್ಲಿ ರುಜು ಹಾಕಿಲ್ಲ. ಮಾನ್ಯ ಪಿ.ರಾಜೀವ್‌ರವರು ಮಾತನಾಡುವುದು.

(ಗೊಂದಲ)

ಶ್ರೀ ಕೆ.ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ನಿನ್ನೆ ರುಜು ಹಾಕಿಲ್ಲದವರೆಲ್ಲರಿಗೂ ನಿಯಮ 69ರ ಅಡಿಯಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

ಅಧ್ಯಕ್ಷರು : ನೋಡುತ್ತೇನೆ ತಾಳಿ. ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಶಿವಮೂರ್ತಿ : ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ಎಲ್ಲಾ ಶಾಸಕರು ಮಾತನಾಡಿದ್ದಾರೆ. ದಯವಿಟ್ಟು ತಾಂಡಾಗಳಿಂದ ಬಂದಿರುವಂತಹ ಪ್ರತಿನಿಧಿಗಳಿಗೆ ಮಾತನಾಡಲು ಅವಕಾಶ ಕೊಡಿ. ಅವರು ಮಾತನಾಡಿದ ನಂತರ ಮಾನ್ಯ ಸಚಿವರು ಮಾತನಾಡಿ ಎಂದು ವಿನಂತಿ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎರಡನೇ ಬಾರಿ ಮಾನ್ಯ ಶಿವಮೂರ್ತಿಯವರು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಎರಡು ನಿಮಿಷ ಮಾತನಾಡಿ ಬಿಡಲಿ. ಆನಂತರ ಮಾತನಾಡಿ.

(ಗೊಂದಲ)

ಡಾ. ಉಮೇಶ್ ಜಿ.ಜಾಧವ್ (ಚಿಂಚೋಳಿ) : ಈಗಾಗಲೇ 10–15 ತಾಂಡಾಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಮಾಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಂದಾಯ ಸಚಿವರಾಗಿದ್ದಾಗ ಪ್ರಾಜೆಕ್ಟ್ ಪ್ರಾರಂಭ ಮಾಡಿದ್ದಾರೆ. ಆದರೆ ಇಲ್ಲಿಯವರೆಗೂ ತಾಂಡಾಗಳು ಎಷ್ಟಿವೆ ಎಂಬುದನ್ನು ಯಾರೂ ಖಚಿತವಾಗಿ ಹೇಳುತ್ತಿಲ್ಲ.Joint survey ಮಾಡಬೇಕು. There are lots of problems. There are no roads to the Thandas, nobody is visiting Thands. They are not getting proper report. They are deprived of all the facilities. There are no schools, no roads and even no officers are going. We want a joint survey to be conducted and correct number of Tandas to be identified and revenue villages have to be declared as errly possible. For the past 15 years that matter is pending. We have been deprived of all the facilities. You can see all the problems in our Thandas. ತಾವು ಆದಷ್ಟು ಬೇಗನೆಜಾಯಿಂಟ್ ಸರ್ವೆ ಮಾಡಿ correct report ಅನ್ನು submit ಮಾಡಬೇಕು. The Revenue Department

does not know the total number of thandas. ಖಚಿತವಾಗಿ ಎಷ್ಟು ತಾಂಡಾಗಳಿವೆ ಎಂಬುದು ಅವರಿಗೆ ಗೊತ್ತಿಲ್ಲ.There are more than 4000 Thandas.They are neglecting our hamlets. We request sincerely, ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲಿ correct report ಬಂದು war-footing ನಲ್ಲಿ work start ಆಗಬೇಕು ಮತ್ತು we have to get facilities to our Thandas.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಮಾತನಾಡುವುದು.

(ಗೊಂದಲ)

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಹೆಚ್.ಪಾಟೀಲ್ ಸಾಹೇಬರು ಕಂದಾಯ ಸಚಿವರಾಗಿದ್ದಾಗಿಂದಲ್ಲೂ ಎಲ್ಲಾ ಲಂಬಾಣಿ ತಾಂಡಾಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಿದ್ದರು. ನಾನೂ ಸಹ ಹಿಂದಿನ ಬಾರಿ ಶಾಸಕನಾಗಿ ಸಾಕಷ್ಟು ಬಾರಿ ಸದನದಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೂ ಇದೆ. ಆದರೂ ಸಹಿತ ನಮ್ಮ ಮಾನ್ಯ ಶಿವಮೂರ್ತಿಯವರು ಹೇಳಿದ ಹಾಗೆ ಹಾಗೂ ಡಾ:ಉಮೇಶ್‌ರವರು ಹೇಳಿದ ಹಾಗೆ ನಿಜವಾಗಿಯೂ ಎಷ್ಟು ತಾಂಡಾಗಳಿವೆ, ಎಷ್ಟು ಜನಸಂಖ್ಯೆ ಇದೆ. ಎಲ್ಲೆಲ್ಲಿ ವಾಸವಾಗಿದ್ದಾರೆ ಎನ್ನುವ ನಿಜ ಚಿತ್ರಣ ಇಲ್ಲಿಯವರೆಗೂ ಸಿಗುತ್ತಿಲ್ಲ. ಕಂದಾಯ ಇಲಾಖೆಯವರು ಕೊಡತಕ್ಕಂಥ ಅಂಕಿ-ಅಂಶಗಳು ಕೇವಲ ಕಾಲ್ಪನಿಕವಾಗಿಯೇ ಹೊರತು ಎಲ್ಲಿಯೂ ಕೂಡ ಇಷ್ಟೇ ಜನಸಂಖ್ಯೆ ಇದೆ ಎಂದು ಇವತ್ತಿನವರೆಗೂ ನಿಖರವಾಗಿ ಹೇಳುತ್ತಿಲ್ಲ. 2011 ರ ಜನಸಂಖ್ಯೆ ಆಧಾರದ ಮೇಲೆ ನಮ್ಮ ಎಲ್ಲಾ ತಾಂಡಾಗಳಿಗೆ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ. ಇವತ್ತು ಅರಣ್ಯದಲ್ಲಿ ಬೇರೆ ಬೇರೆ ಕಡೆ ವಾಸವಾಗಿದ್ದಾರೆ. ಅಂತಹವರ ಸ್ಥಿತಿ ಚಿಂತಾಜನಕವಾಗಿದೆ. ಮಕ್ಕಳನ್ನು ಮಾರಾಟ ಮಾಡುವಂತಹ ವ್ಯವಸ್ಥೆ ಕೂಡ ಈ ತಾಂಡಾಗಳಲ್ಲಿ ನಡೆಯುತ್ತಿವೆ. ಆದ್ದರಿಂದ ಸರ್ಕಾರ ಹೆಚ್ಚು ಗಮನವನ್ನು ಹರಿಸಿ 'ಕಂದಾಯ ಗ್ರಾಮ'ಗಳನ್ನಾಗಿ ಮಾಡಲು ಅನುವು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ : ಮಾನ್ಯ ಶಿವಮೂರ್ತಿಯವರು ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರು. ನಾನು ಆಗಲೂ ಕೂಡಾ ಇದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಈಗ ನಿಯಮ 69ರ ಅಡಿಯಲ್ಲಿ ಸೂಚನೆ ಕೊಟ್ಟು ಚರ್ಚೆಗೆ ತೆಗೆದುಕೊಂಡು ತುಂಬಾ ಮಾತನಾಡಿದ್ದಾರೆ. ಈಗ ಕರ್ನಾಟಕ ರಾಜ್ಯದಲ್ಲಿರುವಂತಹ 'ಕಂದಾಯರಹಿತ ಗ್ರಾಮ'ಗಳನ್ನಾಗಿ ಕಾನೂನು, ಸ್ಥಾನಮಾನ, ಪರಿವರ್ತನೆ ಮಾಡುವುದು, ಮಾನವೀಯತೆ ಮತ್ತು ಮಾನವ ಹಕ್ಕಿನ ಅಡಿಯಲ್ಲಿ ಗೊಲ್ಲರ ಹಟ್ಟಿ, ಲಂಬಾಣಿ ತಾಂಡಾ, ಹಾಡಿಗಳು, ಕ್ಯಾಂಪ್ ಕಾಲೋನಿಗಳಲ್ಲಿ ವಾಸಿಸುವ ಜನರಿಗೆ ಯೋಜನಾ ಆಯೋಗದಿಂದ ನೇರವಾಗಿ ಹಣ ತೊಡಗಿಸುವ ಕಂದಾಯರಹಿತ ಗ್ರಾಮಗಳಿಗೆ ಗ್ರಾಮ ಸಭೆ ನಡೆಸಲು ಮೂಲಭೂತ ಸೌಲಭ್ಯ ದೊರಕಿಸುವ ವಿಚಾರದಲ್ಲಿ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಈಗಾಗಲೇ ನಾನು ಶೂನ್ಯವೇಳೆಯಲ್ಲಿ ಇದರ ಬಗ್ಗೆ ಹೇಳಿದ್ದೇನೆ. ಆದರೆ ಅಧಿಕಾರಿಗಳು ಕೊಟ್ಟಿರುವುದನ್ನು ಇಲ್ಲಿ ಸದನದಲ್ಲಿ ಬಂದು ಹೇಳುತ್ತಾರೆ ಎಂದು ತಾವು ಸ್ವಲ್ಪ taunt ಮಾಡಿದಿರಿ. ಅಧಿಕಾರಿಗಳಿಂದ ನಾವು information ಅನ್ನು ತೆಗೆದುಕೊಳ್ಳಬೇಕು, ವಿವರವನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಮಾಹಿತಿಯನ್ನು ತೆಗೆದುಕೊಳ್ಳಬೇಕಾರೆ ನಾವು ಸಮಾಲೋಚನೆ ಮಾಡಿ ಬರುತ್ತೇವೆ. ತಮ್ಮ ಸಲಹೆಯನ್ನೂ ನಾವು ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ತಿಳಿಸುತ್ತಿದ್ದೇನೆ. 1994ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದರು. ಏನೆಂದರೆ, ಎಲ್ಲಿ 100 ಮನೆಗಳಿವೆ, 500 ಜನಸಂಖ್ಯೆ ಇದೆ, ಅಲ್ಲಿಗೆ 4 ಸೌಲಭ್ಯಗಳನ್ನು ಕೊಡಬೇಕು, ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆಂದು ಸುತ್ತೋಲೆಯಲ್ಲಿ ಇತ್ತು. ಆದರೆ ಇತ್ತೀಚೆಗೆ ಅದನ್ನು ಸಡಿಲ ಮಾಡಿದ್ದೇವೆ. ಎಲ್ಲಾ ತಾಂಡಾಗಳನ್ನೂ ಕೂಡ ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆಂದು ಹೇಳಿದರು. ಒಂದು ಮಾತನ್ನು ತುಂಬಾ ಚೆನ್ನಾಗಿ ಹೇಳಿದರು, ಇದುವರೆಗೂ ನಾವು ಕೆಲವು ತಾಂಡಾಗಳನ್ನು, ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿದ್ದೇವೆ. ಕಂದಾಯ ಗ್ರಾಮಗಳನ್ನಾಗಿ ಮಾಡಿದ್ದು ಏಕೆ, ಮಾಡದೇ ಇರುವುದು ಏಕೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಇದುವರೆಗೂ ಮಾಡಿರತಕ್ಕಂಥದ್ದಕ್ಕೆ ಏಕೆ, ಮಾಡದೇ ಇರುವುದಕ್ಕೆ ಕಾರಣಗಳು ಏನು ಎನ್ನುವುದರ ಬಗ್ಗೆ ಕಾನೂನು ಮಂತ್ರಿಗಳ ಹತ್ತಿರ ಚರ್ಚೆ ಮಾಡಿದೆ. ಇದಕ್ಕೆ ಏನು ಕಾರಣ ಇದೆ? ಒಟ್ಟು ನಮ್ಮಲ್ಲಿ ಸುಮಾರು 893

ತಾಂಡಾಗಳಲ್ಲಿ 241 ತಾಂಡಾಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಪರಿವರ್ತನೆ ಮಾಡಿದ್ದೀರಿ. ಸುಮಾರು 652 ಗ್ರಾಮಗಳು 'ಕಂದಾಯ ರಹಿತ' ಗ್ರಾಮಗಳಾಗಿ ಏಕೆ ಉಳಿದಿದೆ, ಇಷ್ಟನ್ನು ಮಾಡಿದ್ದೀರಿ ಮತ್ತೆ ಉಳಿದಿದ್ದನ್ನು ಏಕೆ ಮಡುವುದಕ್ಕೆ ಆಗಿಲ್ಲ ಎನ್ನುವ ಪ್ರಶ್ನೆ ಬಂತು. ತುಂಬಾ ಚೆನ್ನಾಗಿ ನಾನು ಕಾನೂನು ಸಚಿವರ ಜೊತೆ ಸಮಾಲೋಚನೆ ಮಾಡಿದ್ದೇನೆ. ತಾವು ಮುಖ್ಯವಾಗಿ ಏನು ಹೇಳಿದಿರಿ, Revenue Act ಗೆ amendment ಮಾಡುವ ವಿಷಯ ನಮ್ಮ ಮುಂದೆ ಇದೆ. ಅದನ್ನು ಚರ್ಚೆ ಮಾಡಿದ್ದೇವೆ. ತಾವು ಹೇಳಿದ್ದು ಸರಿಯಿದೆ. ಏಕೆಂದರೆ ತಾಂಡಾಗಳು ಇರಲಿ, ಹಟ್ಟಿಗಳು ಇರಲಿ, ಎಲ್ಲಿ ಸರ್ಕಾರಿ ಭೂಮಿಗಳಲ್ಲಿ ತಾಂಡಾಗಳು ಇತ್ತು. ಎಲ್ಲಿ ಹಟ್ಟಿಗಳು ಇತ್ತು, ಅವೆಲ್ಲವನ್ನೂ ಕೂಡ ಕಂದಾಯ ಗ್ರಾಮಗಳನ್ನಾಗಿ ಮಾಡಿದ್ದೇವೆ. ಖಾಸಗಿಯವರ ಸ್ವತ್ತಾಗಿರತಕ್ಕಂತಹ ಯಾವ ತಾಂಡಾಗಳು, ಹಟ್ಟಿಗಳು ಇವೆ, ಅವುಗಳನ್ನು ಮಾಡುವುದಕ್ಕೆ ತೊಂದರೆ ಇದೆ ಹಾಗೂ ಕಾನೂನಿನಲ್ಲಿ ಸಮಸ್ಯೆಗಳು ಇವೆ ಎಂಬುದರ ಬಗ್ಗೆ ಅರ್ಥ ಮಾಡಿದ್ದೇವೆ. ಹಾಗಾಗಿ ಮೂಲ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಅದನ್ನು ಸರಿಪಡಿಸಿಕೊಂಡು ನಂತರ ತಾವು ಹೇಳಿದ ಹಾಗೆ ಬಹಳ ಮುಖ್ಯವಾಗಿ ಅದಾದರೆ, ಇವೆಲ್ಲವೂ ಸರಿಹೋಗುತ್ತದೆ. ಒಂದು Revenue Act ಗೆ amendment ತರುವುದು ಹೇಗೆ ಎನ್ನುವುದನ್ನು ನಾವು ಈಗಾಗಲೇ ಕಾನೂನು ಸಚಿವರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇವೆ. ಅವರ ಮನಸ್ಸಿನಲ್ಲಿರತಕ್ಕಂತಹ ಆತಂಕ ನಮಗೆ ಎಲ್ಲರಿಗೂ ಕೂಡ ಅರ್ಥವಾಗಿದೆ. ಈ ಬಗ್ಗೆ ಸದ್ಯದಲ್ಲಿಯೇ ಸಮಾಲೋಚನೆ ಮಾಡಿ, ಸದನದಲ್ಲಿ ಚರ್ಚೆ ಮಾಡಿ ಆ ಎಲ್ಲಾ ತಾಂಡಾಗಳು ಮತ್ತು ಹಟ್ಟಿಗಳು ಏನೇನು ಇದೆ ಆ ಕಂದಾಯರಹಿತ ಗ್ರಾಮಗಳನ್ನು ನಾವು ಖಂಡಿತವಾಗಿ ಕಂದಾಯ ಗ್ರಾಮಗಳನ್ನಾಗಿ ಮಾಡಿಕೊಡುತ್ತೇವೆ. ಅದಕ್ಕಾಗಿ Revenue Actಗೆ ತಿದ್ದುಪಡಿಯನ್ನು ತರುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : O.K. ಬೋಪಯ್ಯನವರೆ, ತಾವು ಮಾತನಾಡಿ.

3. ವಿಷಯ : ರಾಜ್ಯ ಸರ್ಕಾರದಿಂದ ಮಂಜೂರಾಗಿದ್ದ ಮೊರಾರ್ಜಿ ಶಾಲೆ,

ಕಿತ್ತೂರು ರಾಣಿ ಚೆನ್ನಮ್ಮ ಮತ್ತು ವಾಜಪೇಯಿವಸತಿ ನಿಲಯ ಶಾಲೆಗಳನ್ನು ಮುಚ್ಚಲು ಆದೇಶವಾಗಿರುವುದರಿಂದ ಪರಿಶಿಷ್ಟ ಜಾತಿ,